<u>ಸಾಕ್ಷಿಯನ್ನು ದಿಃ05.01.2022 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ಎನ್.ಎಸ್ ವಕೀಲರಿಂದಃ</u>

ಈ ದಾವೆಯನ್ನು 3 ಎಕರೆ 36 ಗುಂಟೆ 4 ಗುಂಟೆ ಕರಾಬು ಮೇಲೆ ಹಾಕಿರುತ್ತೇನೆ. ನನ್ನ ವಾದ ಪತ್ರದಲ್ಲಿ ಒಂದು ಐಟಂ ಸ್ವತ್ತನ್ನು ಮಾತ್ರ ತೋರಿಸಲಾಗಿರುತ್ತದೆ.ವಾದ ಪತ್ರದಲ್ಲಿ ತೋರಿಸಿರುವ 1 ಎಕರೆ 39 ಗುಂಟೆ ಜಮೀನಿನ ಬಗ್ಗೆ ನನಗೆ ಗೊತ್ತಿಲ್ಲ. ಸದರಿ 1 ಎಕರೆ 39 ಗುಂಟೆ ಜಮೀನನ್ನು ಸೀತಪ್ಪ ಮತ್ತು ಸೊಣ್ಣಪ್ಪ ಯಾನೆ ಮುನಿಸ್ವಾಮಿ ಎಂಬುವವರು ಮುನೇಗೌಡರಿಂದ ಖರೀದಿ ಮಾಡಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿಗಳು ಸೀತಪ್ಪನ ಮಕ್ಕಳಾಗಿರುತ್ತಾರೆ ಎಂದರೆ ಸರಿ. ಸೊಣ್ಣಪ್ಪನ ಮಗ 1 ನೇ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿ. ಸದರಿ 1 ಎಕರೆ 39 ಗುಂಟೆಗೆ ಜಮೀನಿಗೆ ಪೂರ್ವಕ್ಕೆ ರಾಮಪ್ಪ, ಪಶ್ಚಿಮಕ್ಕೆ ಮುನಿರಾಜಪ್ಪ, ಉತ್ತರಕ್ಕೆ ಸೀತಪ್ಪನ ಜಮೀನು ಮತ್ತು ದಕ್ಷಿಣಕ್ಕೆ ನನ್ನ ಸ್ವತ್ತು. ಉತ್ತರ ದಿಕ್ಕಿಗೆ ಬರು ಸೀತಪ್ಪನ ಸ್ವತ್ತಿನ ಸರ್ವೇನಂಬರ್ ನನಗೆ ಗೊತ್ತಿಲ್ಲ. ಸದರಿ ಸೀತಪ್ಪ ಮತ್ತು ಸೊಣ್ಣಪ್ಪ ಯಾನೆ ಮುನಿಸ್ವಾಮಿ ಹೆಸರಿಗೆ ಆದ ಕ್ರಯ ಪತ್ರವನ್ನು ನಾನು ತೆಗೆದುಕೊಂಡಿರುತ್ತೇನೆ. ಸದರಿ ಕ್ರಯಪತ್ರ 1956 ರಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಕೆಂಚಪ್ಪನ ಮಗ ಮುನಿಸ್ವಾಮಿ ನನ್ನ ತಂದೆ. ನನ್ನ ತಂದೆಗೆ ಒಟ್ಟು ಮೂರು ಜನ ಸಹೋದರರು ಅವುರುಗಳೆಂದರೆ ಮುನಿವೆಂಕಟಪ್ಪ, ವೆಂಕಟರಾಮಪ್ಪ ಮತ್ತು ಕೆಂಚಪ್ಪ. ಐಪ್ಪಣ್ಣ ನನ್ನ ತಂದೆಗೆ ಯಾವುದೇ ರೀತಿ ಸಂಭಂದ ಇರುವುದಿಲ್ಲ. ನನ್ನ ತಂದೆಗೆ ದಾವಾ ಸ್ವತ್ತುಗಳನ್ನು ಬಿಟ್ಟು ಬೇರೆ ಯಾವುದೇ ಒಟ್ಟು ಕುಟುಂಬದ ಸ್ವತ್ತು ಇರುವುದಿಲ್ಲ. ಸದರಿ ನನ್ನ

ತಂದೆಯ ಸಹೋದರ ಕೆಂಚಪ್ಪನಿಗೆ ಐಪ್ಪಣ್ಣ ಮಗನಾಗಿರುತ್ತಾನೆ ಎಂದರೆ ಸಾಕ್ಷಿಯು ಅವರಿಗೆ ಸಂಭಂದ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ-3 ರಲ್ಲಿ ಹಿಂಭಾಗದಲ್ಲಿ ನಮೂದಿಸಿರುವ ಸೊಣ್ಣಪ್ಪ ಮತ್ತು ಸೀತಪ್ಪ ಪ್ರತಿವಾದಿಗಳ ತಂದೆಯಾಗಿರುತ್ತಾರೆ ಎಂದರೆ ಅದು ಸುಳ್ಳು ನಿಪಿ-3 ರ ಹಿಂಭಾಗದಲ್ಲಿ ನಮೂದಿಸಿರುವ ಕೃಷ್ಣಪ್ಪ ಯಾರು ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆ ಈಗ ಮರಣ ಹೊಂದಿ ಸುಮಾರು 35 ವರ್ಷವಾಗಿರುತ್ತದೆ. ಸದರಿ ನಿಪಿ-3 ರಲ್ಲಿ ನಮೂದು ಇರುವ ಸೊಣ್ಣಪ್ಪ ಸೀತಪ್ಪ ಹೆಸರನ್ನು ಪ್ರಶ್ನೆ ಮಾಡಿ ಯಾವುದೇ ಆಪೀಲು ಸಲ್ಲಿಸಿರುವುದಿಲ್ಲ. ನಿಪಿ-8 ರಲ್ಲಿ ನಮೂದಿಸಿರುವ ಒಕ್ಕಣೆಗಳನ್ನು ಪ್ರಶ್ನೆ ಮಾಡಿದ್ದಿರ ಎಂಬ ಪ್ರಶ್ನೆಗೆ ಸಾಕ್ಷಿಯು ಆ ಕಾರಣಕ್ಕಾಗಿ ಈ ದಾವೆಯನ್ನು ಹೂಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ 1 ಎಕರೆ 39 ಗುಂಟೆ ಹೊರತು ಪಡಿಸಿ ಉಳಿದ ಜಮೀನಿನಲಿ ನಾವು ಬೈ ಮಾತಿನ ಮೂಲಕ ಹಂಚಿಕೊಂಡಿದ್ದೇವೆ. ಆ ಸಮಯದಲ್ಲಿ ಸದರಿ 1 ಎಕರೆ 39 ಗುಂಟೆ ಸೊಣ್ಣಪ್ಪ ಮತ್ತು ಸೀತಪ್ಪನವರ ಹೆಸರಿನಲ್ಲಿ ಉಳಿದುಕೊಂಡಿತ್ತು ಎಂದರೆ ಸರಿ.

ಸದರಿ ವಿಭಾಗವಾದ ನಂತರ ಆ ಸ್ವತ್ತುಗಳ ಮೇಲೆ ನಾವು ಸಾಲ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಸದರಿ 1 ಎಕರೆ 39 ಗುಂಟೆ ಜಮೀನಿನಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ನಮ್ಮ ಹೆಸರಿಗೆ ಮಾಡಿಕೊಡುವಂತೆ ತಹಸಿಲ್ದಾರ್ ರವರಿಗೆ ಯಾವುದೇ ಅರ್ಜಿಯನ್ನು ಕೊಟ್ಟಿರುವುದಿಲ್ಲ. ನಾವು ವಿಭಾಗ

ಮಾಡಿಕೊಂಡ ಸ್ವತ್ತುಗಳಲ್ಲಿ ನಾವು ವ್ಯವಸಾಯ ಮಾಡಿಕೊಂಡು ನಾವೇ ಸ್ವಾಧೀನದಲ್ಲಿ ಇರುತ್ತೇವೆ. ನಾವು ವಿಭಾಗ ಮಾಡಿಕೊಂಡ ಜಮೀನಿನ ಸ್ವಾಧೀನಕ್ಕೆ ಪ್ರತಿವಾದಿಗಳು ಯಾವುದೇ ತೊಂದರೆ ಮಾಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲುಃ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**
(ದೀಪು ಬಿ.ಸಿ.)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಬಂಗಾರಪೇಟೆ.